ದಿನಾಂಕ: 06-02-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ವಾದಿ ಪರ ಶ್ರೀ ಬಿ.ಎಂ ವಕೀಲರಿಂದ,</u>**

ಈ ದಾವೆಯನ್ನು ಮುಮ್ತಾಜ ರವರು ನನ್ನ ಮೇಲೆ ಹಾಕಿರುತ್ತಾರೆ. ನಾನು ಅವರ ಕಡೆಯಿಂದ ರೂ.1,50,000/- ಹಣ ಪಡೆದಿದ್ದೆ. ಅದಕ್ಕೆ ನನ್ನ ಇಬ್ಬರು ಮಕ್ಕಳು ಸಾಕ್ಷಿದಾರರು ಇರುತ್ತಾರೆ. ಅವರ ಹೆಸರು ಸುನೀಲ್ ಮತ್ತು ಅನಿಲ್. ಅವರು ನಿಪಿ 1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾನು ಸದರಿ ಹಣ ವಾದಿಗೆ ಮರು ಪಾವತಿಸಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ರೂ.50 ಸಾವಿರ ಹಾಕಿರ ಒಟ್ಟು ರೂ.2 ಲಕ್ಷ ಹಣ ಮರುಪಾವತಿಸಿರುತ್ತೇನೆ. ಸದರಿ ಹಣ ಯಾವಾಗ ಕೊಟ್ಟಿರುತ್ತೇನೆ ಎಂದು ದಿನಾಂಕ ಗೊತ್ತಿಲ್ಲ. ಸದರಿ ಹಣವನ್ನು ಒಟ್ಟಿಗೆ ಕೊಟ್ಟಿರುತ್ತೇನೆ.

ವಾದಿ ಕೊಟ್ಟಿರುವ ನೋಟಿಸ್ ಗೆ ನಾನು ಅದಕ್ಕೆ ಉತ್ತರ ಕೊಟ್ಟಿರುವುದಿಲ್ಲ, ಕಾರಣ ನನಗೆ ಆರೋಗ್ಯ ಸರಿ ಇರಲಿಲ್ಲ. ವಾದಿಗೆ ರೂ.2 ಲಕ್ಷ ಕೊಟ್ಟ ನಂತರ ನಾನು ಬರೆದು ಕೊಟ್ಟ ಪತ್ರವನ್ನು ನಾನು ಅವರಿಂದ ವಾಪಸ್ಸು ಪಡೆದಿರುವುದಿಲ್ಲ. ನಾನು ವಾದಿಗೆ ಯಾವುದೇ ಹಣ ಮರು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದುಡ್ಡು ಮರುಪಾವತಿಸದೆ ಇದ್ದ ಕಾರಣ ವಾದಿ ಈ ದಾವೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾನು ದುಡ್ಡು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.